ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.

**SC No**.202/2021

**PW**. 5

**CW**. 9

**ಸಾಕ್ಷಿಯ ಹೆಸರು -ಕುಮಾರೇಗೌಡ**

**ತಂದೆಯ ಹೆಸರು -ಅಪ್ಪಾಜಿಗೌಡ**

**ವಯಸ್ಸು -58 ವರ್ಷಗಳು**

ದಿನಾಂಕ 10-12-2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ -ವ್ಯವಸಾಯ**

**ವಾಸಸ್ಥಳ -ಸಣ್ಣೇಗೌಡರ ಕಾಲೋನಿ , ಹುಣಸೂರು ತಾಃ**

**ಮುಖ್ಯ ವಿಚಾರಣೆಃ- ಸರ್ಕಾರಿ ಅಭಿಯೋಜಕರಿಂದಃ-**

ಚಾಸಾ-1, 2 ಹಾಗೂ ಆರೋಪಿತರು ಗೊತ್ತು. ಚಾಸಾ-1, 2 ಹಾಗೂ ಆರೋಪಿತರ ನಡುವೆ ಆದ ಗಲಾಟೆ ನನಗೆ ತಿಳಿದುಬಂದಿಲ್ಲ. ಈಗ್ಗೆ 4-5 ವರ್ಷಗಳ ಹಿಂದೆ 1 ನೇ ಆರೋಪಿ ತನ್ನ ಮನೆ ಬಳಿ ಪೊಲಿಸೀರನ್ನು ಕರೆದುಕೊಂಡು ಬಂದು, 1 ನೇ ಆರೋಪಿ ತನ್ನ ಮನೆಯ ಒಳಗೆ ಹೋಗಿ ಕೃತ್ಯಕ್ಕೆ ಉಪಯೋಗಿಸಿದ ಒಂದು ಮಚ್ಚನ್ನು ತಂದು ಪೊಲೀಸರಿಗೆ ಹಾಜರು ಮಾಡಿದ. ಪೊಲೀಸರು ಆ ಬಗ್ಗೆ ಒಂದು ಪಂಚನಾಮೆ ಮಾಡಿ, ಪಂಚನಾಮೆಗೆ ನನ್ನ ಸಹಿ ಪಡೆದರು. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-10 ಎಂದು ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸದರಿ ಮಚ್ಚನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ. ನನ್ನೊಂದಿಗೆ ಚಾಸಾ-10 ರವರು ಸ್ಥಳದಲ್ಲಿ ಇದ್ದು , ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಅವುಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ-11 ರಿಂದ 12 ಎಂದು

ಗುರುತಿಸಲಾಯಿತು. ನಿಪಿ-11 ಮತ್ತು 12 ರಲ್ಲಿ ಕಾಣುತ್ತಿರುವ ಮನೆ 1 ನೇ ಆರೋಪಿ ಮನೆ ಆಗಿರುತ್ತದೆ,

**ಪಾಟೀಸವಾಲುಃ- ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ-**

ಆರೋಪಿತರ ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀಸವಾಲನ್ನು 1000/- ವೆಚ್ಚದ ಮೇರೆಗೆ ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.